ಪ್ರಶ್ನೆ. ೧೪೦೫—ಮಾನ್ಯ ಸದಸ್ಯರಾದ ಶ್ರೀ ಪಿ. ಬಿ. ಓಂಕಾರಮೂರ್ತಿ ಅವರು ಹಾಜರಿರಲಿಲ್ಲ.

ಪ್ರಶ್ನೆ. ೫೫೧—ಮಾನ್ಯ ಸದಸ್ಯರಾದ ಶ್ರೀ ಚಂದ್ರಶೇಖರ ಮಾವಿನ ಅವರು ಹಾಜರಿರಲಿಲ್ಲ.

ಶ್ರೀ ಕೆ. ಬಿ. ಕೋಳಿವಾಡ್.—ಈ ಯೋಜನೆಗೆ ಹೋದಪರ್ಷ ೪ ಲಕ್ಷ ರೂಪಾಯಿಗಳನ್ನು ಇಡಲಾಗಿತ್ತು. ಈ ವರ್ಷದ ಬಡ್ಜೆಟ್‌ನಲ್ಲಿ ಎಷ್ಟು ಹಣವನ್ನು ಇಡಲಾಗಿದೆ?

ಅಧ್ಯಕ್ಷರು.—ಅದನ್ನು ಬಡ್ಜೆಟ್ ಪುಸ್ತಕದಲ್ಲಿ ಕೊಟ್ಟಿರುತ್ತಾರೆ. ತಾವು ನೋಡಿ.

ಶ್ರೀ ಕೆ. ಬಿ. ಕೋಳಿವಾಡ್.—ಈ ವರ್ಷದ ಬಡ್ಜೆಟ್‌ನಲ್ಲಿ ೭ ಲಕ್ಷ ರೂಪಾಯಿಗಳನ್ನು ಇದಕ್ಕಾಗಿ ಇಟ್ಟಿರುವುದನ್ನು ನೋಡಿದ್ದೇನೆ, ಮಾನ್ಯ ಮಂತ್ರಿಗಳು ಅದನ್ನು ನೋಡಿರಬಹುದೆಂದು ಕೇಳಿದೆ.

ಪ್ರಶ್ನೆ. ೧೪೭೫ (ಮಾನ್ಯ ಸದಸ್ಯರು ಹಾಜರಿಲ್ಲ)

ಪ್ರಶ್ನೆ. ೯೧೮ (ಮಾನ್ಯ ಸದಸ್ಯರು ಹಾಜರಿಲ್ಲ)

ಪ್ರಶ್ನೆ. ೧೧೧೧. (ಮಾನ್ಯ ಸದಸ್ಯರು ಹಾಜರಿಲ್ಲ)

ರಾಜ್ಯದಲ್ಲಿನ ಖಾಸಗಿ ಹಾಗೂ ಸರಕಾರಿ ವೈದ್ಯಕೀಯ ಮಹಾವಿದ್ಯಾಲಯಗಳು

೯೧೨. ಶ್ರೀಮಹಮ್ಮದ್ ಮೊಯಿನುದ್ದೀನ್ (ಚಾಮರಾಜ ಪೇಟೆ).—ಮಾನ್ಯ ಆರೋಗ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ಕಾರಿ ಮತ್ತು ಖಾಸಗೀ ವೈದ್ಯಕೀಯ ವಿದ್ಯಾಲಯಗಳು ರಾಜ್ಯದಲ್ಲಿ ಎಷ್ಟಿವೆ? ಮತ್ತು ಇವುಗಳ ಹೆಸರುಗಳೇನು?

ಆ) ಭಾರತೀಯ ವೈದ್ಯಕೀಯ ಪರಿಷತ್ತಿನ ಮಾನ್ಯತೆ ಪಡೆಯದಿರುವ ವೈದ್ಯಕೀಯ ವಿದ್ಯಾಲಯಗಳ ಹೆಸರುಗಳೇನು?

ಇ) ಈ ವೈದ್ಯಕೀಯ ವಿದ್ಯಾಲಯಗಳಿಗೆ ಭಾರತೀಯ ವೈದ್ಯಕೀಯ ಪರಿಷತ್ತು ಮಾನ್ಯತೆ ನೀಡದಿರುವುದಕ್ಕೆ ಕಾರಣಗಳೇನು?

ಶ್ರೀ ಎಚ್. ಎಲ್. ತಿಮ್ಮೇಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು).—

ಅ) ರಾಜ್ಯದಲ್ಲಿ ಸರ್ಕಾರಿ ವೈದ್ಯಕೀಯ ವಿದ್ಯಾಲಯಗಳು ನಾಲ್ಕು (೪) ಇವೆ. ಮತ್ತು ಖಾಸಗೀ ವೈದ್ಯಕೀಯ ವಿದ್ಯಾಲಯಗಳು ಹನ್ನೊಂದು (೧೧) ಇವೆ. ಮತ್ತು ಇವುಗಳ ಹೆಸರುಗಳು ಈ ಕೆಳಕಂಡಂತಿದೆ.

I. ಸರ್ಕಾರಿ ವೈದ್ಯಕೀಯ ವಿದ್ಯಾಲಯಗಳ ಹೆಸರುಗಳು.

೧. ಬೆಂಗಳೂರು ವೈದ್ಯಕೀಯ ಮಹಾವಿದ್ಯಾಲಯ, ಬೆಂಗಳೂರು.

೨. ಮೈಸೂರು ವೈದ್ಯಕೀಯ ಮಹಾವಿದ್ಯಾಲಯ, ಮೈಸೂರು.

೩. ಕರ್ನಾಟಕ ವೈದ್ಯಕೀಯ ಮಹಾವಿದ್ಯಾಲಯ, ಹುಬ್ಬಳ್ಳಿ.

೪. ಬಳ್ಳಾರಿ ವೈದ್ಯಕೀಯ ಮಹಾವಿದ್ಯಾಲಯ, ಬಳ್ಳಾರಿ.

II. ಖಾಸಗೀ ವೈದ್ಯಕೀಯ ವಿದ್ಯಾಲಯಗಳ ಹೆಸರುಗಳು ಈ ಕೆಳಕಂಡಂತಿವೆ.

೧. ಸೇಂಟ್ ಜಾನ್ಸ್ ವೈದ್ಯಕೀಯ ಮಹಾವಿದ್ಯಾಲಯ, ಬೆಂಗಳೂರು.

೨. ಎಂ. ಎಸ್. ರಾಮಯ್ಯ ವೈದ್ಯಕೀಯ ಮಹಾವಿದ್ಯಾಲಯ, ಬೆಂಗಳೂರು.

೩. ವೈದ್ಯಕೀಯ ವಿಜ್ಞಾನ ಕೆಂಪೇಗೌಡ ಸಂಸ್ಥೆ, ಬೆಂಗಳೂರು.

೪. ಡಾ॥ ಅಂಬೇಡ್ಕರ್ ವೈದ್ಯಕೀಯ ಮಹಾವಿದ್ಯಾಲಯ, ಬೆಂಗಳೂರು.

೫. ಜೆ. ಎಸ್.ಎಸ್. ವೈದ್ಯಕೀಯ ವಿದ್ಯಾಲಯ, ಮೈಸೂರು.

೬. ಆದಿ ಚುಂಚನಗಿರಿ ವೈದ್ಯಕೀಯ ವಿದ್ಯಾಲಯ, ಮೈಸೂರು.

೭. ಕಸ್ತೂರಿ ಬಾ ವೈದ್ಯಕೀಯ ವಿದ್ಯಾಲಯ, (ಎ) ಮಂಗಳೂರು, ವಿಭಾಗ (ಬಿ) ಮಣಿಪಾಲ್ ವಿಭಾಗ.

೮. ಜೆ. ಜೆ. ಎಂ. ವೈದ್ಯಕೀಯ ವಿದ್ಯಾಲಯ, ಬೆಳಗಾಂ.

೯. ಆಲ್ ಅಮೀನ್ ವೈದ್ಯಕೀಯ ವಿದ್ಯಾಲಯ, ಬಿಜಾಪುರ.

೧೦. ಜೆ. ಎನ್. ವೈದ್ಯಕೀಯ ವಿದ್ಯಾಲಯ, ಬೆಳಗಾಂ.

೧೧. ಎಂ. ಆರ್. ವೈದ್ಯಕೀಯ ವಿದ್ಯಾಲಯ, ಗುಲಬರ್ಗಾ.

ಆ) ಭಾರತೀಯ ವೈದ್ಯಕೀಯ ಪರಿಷತ್ತಿನ ಖಾಸಗೀ ವೈದ್ಯಕೀಯ ವಿದ್ಯಾಲಯಗಳು ಮಾನ್ಯತೆ ಪಡೆಯಬೇಕಾದ ಇರುವ ಹೆಸರುಗಳು ಈ ಕೆಳಕಂಡಂತಿವೆ.

೧. ಎಂ. ಎಸ್. ರಾಮಯ್ಯ ವೈದ್ಯಕೀಯ ವಿದ್ಯಾಲಯ, ಬೆಂಗಳೂರು.

೨. ವೈದ್ಯಕೀಯ ವಿಜ್ಞಾನ ಕೆಂಪೇಗೌಡ ಸಂಸ್ಥೆ, ಬೆಂಗಳೂರು.

೩. ಡಾ. ಅಂಬೇಡ್ಕರ್ ವೈದ್ಯಕೀಯ ವಿದ್ಯಾಲಯ, ಬೆಂಗಳೂರು.

೪. ಜೆ. ಎಸ್. ಎಸ್. ವೈದ್ಯಕೀಯ ವಿದ್ಯಾಲಯ, ಮೈಸೂರು,

೫. ಆದಿ ಚುಂಚನಗಿರಿ ವೈದ್ಯಕೀಯ ವಿದ್ಯಾಲಯ, ಜವರನಹಳ್ಳಿ, ನಾಗಮಂಗಲ ತಾಲ್ಲೂಕು.

೬. ಆಲ್ ಅಮೀನ್ ವೈದ್ಯಕೀಯ ವಿದ್ಯಾಲಯ, ಬಿಜಾಪುರ.

ಇ) ಭಾರತೀಯ ವೈದ್ಯಕೀಯ ಪರಿಷತ್ತಿನವರು ಈ ಕಾಲೇಜುಗಳನ್ನು ತಪಾಸಣೆ ಮಾಡುವರೆಂದು ತಿಳಿದು ಬಂದಿದೆ. ಭಾರತೀಯ ವೈದ್ಯಕೀಯ ಪರಿಷತ್ತಿನವರು ನಿಗದಿ ಪಡಿಸಿರುವ ಷರತ್ತುಗಳನ್ನು ಈ ಕಾಲೇಜಿನವರು ಒದಗಿಸಿದರೆ, ಅವರು ಈ ಕಾಲೇಜುಗಳಿಗೆ ಮಾನ್ಯತೆ ನೀಡುವರು.

SHI MOHAMMED MOIENUDDIN.—What action the Government has taken against the non-recognised Medical Colleges ?

SRI D. B. INAMDAR.—Sir, six private medical colleges have not been recognised by the Medical Council of India. They have not been derecognised. It is the duty of the concerned Medical Colleges to fulfill all the norms and conditions laid down by the Medical Council of India and get the recognition.

SRI MOHAMMED MOIENUDDIN.—What action the State Government has taken against those non-recognised Medical Colleges ?

SRI D. B. INAMDAR.—Sir, the concerned Institutions have written to us that the Team of the Medical Council of India is coming to inspect these colleges and if these Colleges satisfy the requirements of the Medical Council of India, they will be recognised.

SRI MOHAMMED MOIENUDDIN.—Sir, my question has not been properly understood by the Hon.Minister. Why the Government is allowing these non-recognised Medical Colleges to go ahead when they have not fulfilled the norms and conditions laid down by the M. C. I. ?

SRI D. B. INAMDAR.—Sir, these colleges have been sanctioned by the Government with certain objectives to start medical education by certain s cieties and it is the duty of the concerned medical colleges to get recognition from the M.C.I.

SRI MOHAMMED MOIENUDDIN.—It is not the Government duty bound to see that these colleges fall on the correct lines? Is it not the duty of the Government ? Is the Government so helpless ?

SRI D. B. INAMDAR.—We will look into it and if need be, we will take action.

SRI MOHAMMED MOIENUDDIN.—Will the Hon.Minister atleast assure that the students coming out of these non-recognised Medical Colleges, who are nothing but health hazard to the public, are not recruited or not allowed to practice privately ?

MR. SPEAKER.—The hon.Member is not satisfied with the answer I will allow half-an-hour discussion on this Question.

ಪ್ರಶೆ . ೭೩೬. (ಮಾನ್ಯ ಸದಸ್ಯರು ಹಾಜರಿಲ್ಲ)

ಪ್ರಶ್ನೆ. ೪ (೨೨) (ಮಾನ್ಯ ಸದಸ್ಯರು ಹಾಜರಿಲ್ಲ)

ಪ್ರಶ್ನೆ. ೧೪೯೧. (ಮಾನ್ಯ ಸದಸ್ಯರು ಹಾಜರಿಲ್ಲ)

ಪ್ರಶ್ನೆ. ೧೪೮೨. (ಮಾನ್ಯ ಸದಸ್ಯರು ಹಾಜರಿಲ್ಲ)

ಪ್ರಶ್ನೆ. ೧೪೦೫. (ಮಾನ್ಯ ಸದಸ್ಯರು ಹಾಜರಿಲ್ಲ)

ಪ್ರಶ್ನೆ. ೫೫೧. (ಮಾನ್ಯ ಸದಸ್ಯರು ಹಾಜರಿಲ್ಲ)

ಪ್ರಶ್ನೆ. ೧೨೪೪. (ಮಾನ್ಯ ಸದಸ್ಯರು ಹಾಜರಿಲ್ಲ)

ಪ್ರಶ್ನೆ. ೧೦೯೭. (ಮಾನ್ಯ ಸದಸ್ಯರು ಹಾಜರಿಲ್ಲ)

ಶ್ರೀ ಸಿ. ಕಣ್ಣನ್.—ಈ ರಾಜ್ಯದಲ್ಲಿ ಪರಿಶಿಷ್ಟ ಜಾತಿಯವರ ಮೇಲೆ ದೌರ್ಜನ್ಯ ದಿನವೂ ನಡೆಯುತ್ತಿರುವುದು ಪತ್ರಿಕೆಗಳ ಮೂಲಕ ನಮಗೆ ತಿಳಿದುಬರುತ್ತದೆ. ಈ ರೀತಿ ದೌರ್ಜನ್ಯಕ್ಕೆ ಒಳಗಾದವರು ದೂರು ಕೊಡಲು ಪೋಲೀಸ್ ಸ್ಟೇಷನ್‌ಗೆ ಹೋದರೆ, ಅಲ್ಲಿರುವ ಸಬ್-ಇನ್ಸ್‌ಪೆಕ್ಟರ್ ಅವರು ದೂರು ಗಳನ್ನು ಸ್ವೀಕಾರ ಮಾಡದೆ ಅದಕ್ಕೆ ವಿರುದ್ಧವಾಗಿ ಮಾತನಾಡಿ ಕಳುಹಿಸುತ್ತಿರುವುದು ನಮಗೆ ಗೊತ್ತಾಗಿದೆ. ಇದಕ್ಕೆ ಮಾನ್ಯ ಸಚಿವರು ಏನು ಹೇಳುತ್ತಾರೆ ?

ಶ್ರೀ ಬಿ. ರಾಚಯ್ಯ.—ಯಾರು ಆ ರೀತಿ ನಡದುಕೊಂಡಿದ್ದಾರೆಂದು ನನಗೆ ತಿಳಿಸಿದರೆ, ಅಂತಹ ಸಬ್-ಇನ್ಸ್‌ಪೆಕ್ಟರ್ ಅವರ ವಿಷಯದಲ್ಲಿ ಕಾನೂನು ಪ್ರಕಾರ ಯಾವ ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇನೆಂದು ನಾನು ಈಗಾಗಲೇ ಹೇಳಿದ್ದೇನೆ. ಬಹುಶ: ಅಂತಹವರ ಸಂಖ್ಯೆ ಕಡಿಮೆ ಎಂದೂ ಹೇಳಬಹುದು.

ಶ್ರೀ ಸಿ. ಕಣ್ಣನ್.—ಈ ರೀತಿ ದೌರ್ಜನ್ಯಕ್ಕೆ ಒಳಗಾದವರಿಗೆ ಜಾಸ್ತಿ ಪರಿಹಾರ ಕೊಡುವುದಕ್ಕೆ ಸರ್ಕಾರ ಮುಂದೆ ಬರಬೇಕು.

ಶ್ರೀ ಬಿ. ರಾಚಯ್ಯ.—ಈಗಾಗಲೇ ಸರ್ಕಾರದ ಆದೇಶಕ್ಕನುಗುಣವಾಗಿ ಪರಿಹಾರ ಕೊಡ ಬೇಕೆಂದು ಶಿಫಾರಸ್ ಮಾಡಿದ್ದೇವೆ. ಈ ಹಣವನ್ನು ಸಮಾಜ ಕಲ್ಯಾಣ ಇಲಾಖೆಯಿಂದ ಕೊಡಬೇಕಾಗಿದೆ. ಅದನ್ನು ಜಾಗ್ರತೆ ಕೊಡಿಸುವುದಕ್ಕೆ ವ್ಯವಸ್ಥೆ ಮಾಡುತ್ತೇವೆ.

ಪ್ರಶ್ನೆ. ೧೦೭೮. (ಮಾನ್ಯ ಸದಸ್ಯರು ಹಾಜರಿಲ್ಲ)
ಪ್ರಶ್ನೆ. ೧೩೬೧. (ಮಾನ್ಯ ಸದಸ್ಯರು ಹಾಜರಿಲ್ಲ)
ಪ್ರಶ್ನೆ. ೧೨೭೦. (ಮಾನ್ಯ ಸದಸ್ಯರು ಹಾಜರಿಲ್ಲ)
ಪ್ರಶ್ನೆ. ೫೭೮. (ಮಾನ್ಯ ಸದಸ್ಯರು ಹಾಜರಿಲ್ಲ)
ಪ್ರಶ್ನೆ. ೧೪೭೫. (ಮಾನ್ಯ ಸದಸ್ಯರು ಹಾಜರಿಲ್ಲ)

೧೯೮೫–೮೬ನೇ ಸಾಲಿನಲ್ಲಿ ರಾಜ್ಯದಲ್ಲಿ ನಡೆದ ಅಪರಾಧಗಳು.

೯೧೮. ಶ್ರೀ ಬಿ. ಬಸವಲಿಂಗಪ್ಪ (ಯಲಹಂಕ).—ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ೧೯೮೫–೮೬ ರ ಸಾಲಿನಲ್ಲಿ ಆಸ್ತಿ ಮತ್ತು ವ್ಯಕ್ತಿಗಳ ವಿರುದ್ಧ ರಾಜ್ಯದಲ್ಲಿ ಆದ ಒಟ್ಟು ಅಪರಾಧಗಳೆಷ್ಟು ?

ಆ) ೧೯೮೫–೮೬ರ ಸಾಲಿನಲ್ಲಿ ಪರಿಶಿಷ್ಟ ಜಾತಿ ಹಾಗೂ ದುರ್ಬಲ ವರ್ಗದವರ ಮೇಲೆ ಕೆಳಕಂಡ ಅಂಶಗಳಲ್ಲಿ ನಡೆದ ದೌರ್ಜನ್ಯಕ್ಕೆ ಸಂಭಂಧಪಟ್ಟ ಅಪರಾಧಗಳೆಷ್ಟು ?

ಶ್ರೀ ಬಿ. ರಾಚಯ್ಯ (ಗೃಹ ಮಂತ್ರಿಗಳು).—

ಅ) ಈ ಕೆಳಕಂಡಂತೆ ಅಪರಾಧಗಳಾಗಿವೆ.—

೧) ವ್ಯಕ್ತಿಗಳ ವಿರುದ್ಧ	...	೨೪೪
೨) ಆಸ್ತಿಗಳ ವಿರುದ್ಧ	...	೫೦

ಆ) ಈ ಕೆಳಕಂಡಂತೆ ಅಪರಾಧಗಳಾಗಿವೆ.—

	ಪರಿಶಿಷ್ಟ ಜಾತಿ	ದುರ್ಬಲವರ್ಗ
೧) ಗಂಡಸರು	೨೩೩	೧
೨) ಹೆಂಗಸರು	೧೧	
೩) ಅಸ್ಪೃಶ್ಯತೆಯ ಬಗ್ಗೆ	೫೯೪	—

(ನವೆಂಬರ್ ಅಂತ್ಯದವರೆಗೆ)

ಶ್ರೀ ಬಿ. ಬಸವಲಿಂಗಪ್ಪ— ಮಾನ್ಯ ಅಧ್ಯಕ್ಷರೆ, ೮೫–೮೬ರ ಸಾಲಿನಲ್ಲಿ ಆಸ್ತಿ ಮತ್ತು ವ್ಯಕ್ತಿಗಳ ವಿರುದ್ಧ ರಾಜ್ಯದಲ್ಲಿ ಆದ ಒಟ್ಟು ಅಪರಾಧಗಳೆಷ್ಟು? ಎಂದು ನಾನು ಪ್ರಶ್ನೆ ಕೇಳಿದ್ದೆ. ಅದಕ್ಕೆ ೫೦ ಮತ್ತು ೨೪೪ ಎಂದು ಮಾನ್ಯ ಸಚಿವರು ಹೇಳಿದ್ದಾರೆ. ಆದರೆ, ಈ ಅಪರಾಧಗಳ ಬ್ರೇಕಪ್‌ನ್ನು ಕೊಟ್ಟಿಲ್ಲ. ಯಾವ ಯಾವ ಅಪರಾಧಗಳ ಕೆಳಗೆ ಈ ಸಂಖ್ಯೆಗಳು ಬರುತ್ತವೆ ಎಂಬುದನ್ನು ತಿಳಿಸಬೇಕು ಮತ್ತು ಪರಿಶಿಷ್ಟ ವರ್ಗಗಳು ಮತ್ತು ದುರ್ಬಲ ವರ್ಗಗಳವರಿಗೆ ಆದಂತಹ ದೌರ್ಜನ್ಯಗಳು ಮತ್ತು ಅಪರಾಧಗಳು ಎಷ್ಟೆಂಬುದನ್ನೂ ಸಹ ಹೇಳಿಲ್ಲ. ಇದರಲ್ಲಿ ಅಲ್ಪಸಂಖ್ಯಾತರ ಬಗ್ಗೆ ವಿವರಗಳೂ ಇಲ್ಲ. ಇವರಿಗಾಗಂತ್ರಿರುವ ಅನಾನುಕೂಲಗಳ ಬಗ್ಗೆ ವಿವರಗಳಿಲ್ಲ. ಮತ್ತು ಇದರಲ್ಲಿ ರೇಪ್‌ಗಳು, ಮಹಿಳೆಯರಿಗೆ ಅವಮಾನಗಳು ಎಷ್ಟು ನಡೆದಿವೆ ಎಂಬುದರ ಬಗ್ಗೆಯೂ ಬ್ರೇಕಪ್ ಕೊಡಬೇಕಾಗುತ್ತದೆ. ಆ ವಿವರಗಳೂ ಇಲ್ಲ. ಶ್ರೀ ಕಣ್ಣನ್‌ರವರು ಕೇಳಿದ ಹಾಗೆ, ಕಾಂಪೆನ್ಸೇಷನ್ ಕೊಡುವ ಬಗ್ಗೆ ಸಮಾಜ ಕಲ್ಯಾಣ ಇಲಾಖೆಯವರಿಗೆ ರೆಫರ್ ಮಾಡಿದರೆ ಅಲ್ಲಿ ಪರಿಹಾರವೇ ಸಿಕ್ಕುವುದಿಲ್ಲ. ಆದ್ದರಿಂದ, ಪ್ರತ್ಯೇಕವಾಗಿ ಯಾವ ಯಾವ ಅಪರಾಧಗಳು ಇವೆ ಎಂಬುದರ ವಿವರ ಕೊಡಬೇಕು. ಬಡವರ ಮೇಲೆ ಹೆಲ್ಲೆ